1340 (1792) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಸುವರ್ಣ ಯೋಜನೆಯಡಿ ಎಷ್ಟು ನಿರುದ್ಯೋಗಿ ಯುವಕ ಯುವತಿಯರಿಗೆ ಸರ್ಕಾರ ಉದ್ಯೋಗ ಒದಗಿಸಲಾಗಿದೆ. (ವಿಧಾನಸಭಾ ಕ್ಷೇತ್ರವಾರು ಅಭ್ಯರ್ಥಿಗಳ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಉಡುಪಿ ತಾಲ್ಲೂಕಿನಲ್ಲಿ ಸುವರ್ಣ ಕಾಯಕ ಶಿಕ್ಷಣ ಯೋಜನೆಯಡಿಯಲ್ಲಿ 189 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

ವಿಧಾನಸಭಾ ಕ್ಷೇತ್ರವಾರು ಅಭ್ಯರ್ಥಿಗಳ ವಿವರ :

1) ಉಡುಪಿ – 96

2) ಬ್ರಹ್ಮಾವರ – 60

3) ಕಾಪು – 33

ಒಟ್ಟು 189

1341 (2044) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ರಾಜ್ಯದ ಎಷ್ಟು ಜನ ಬಡ ನೇಕಾರರ ಕುಟುಂಬಗಳಿಗೆ ಸರ್ಕಾರ ಮನೆಗಳನ್ನು ಒದಗಿಸಿಕೊಟ್ಟಿದೆ;

ಆ) ಯಾವ ಯೋಜನೆಗಳಲ್ಲಿ ಸರ್ಕಾರ ಈ ಹಂಚಿಕೆಯನ್ನು ಮಾಡಲಾಗಿದೆ.

ಇ) 10 ಸಾವಿರ ಮನೆಗಳನ್ನು ಬಡ ನೇಕಾರರಿಗೆ ಹಂಚಿಕೆ ಮಾಡುವ ಸರ್ಕಾರದ ಯೋಜನೆಯು ಈಗ ಯಾವ ಹಂತದಲ್ಲಿದೆ;

ಈ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಷ್ಟು ಜನ ಬಡ ನೇಕಾರರಿಗೆ ಸೌಲಭ್ಯವನ್ನು ನೀಡಲಾಗಿದೆ?

ಶ್ರೀ ಅಪ್ಪಾಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು):

ಅ) 2005–06 ನೇ ಸಾಲಿನಲ್ಲಿ 1498 ಮತ್ತು 2006–07 ನೇ ಸಾಲಿನಲ್ಲಿ 365 ಹೀಗೆ ಒಟ್ಟು 1863 ವಸತಿ ರಹಿತ ನೇಕಾರರಿಗೆ ವಸತಿ ಕಾರ್ಯಗಾರಗಳನ್ನು ಒದಗಿಸಲಾಗಿದೆ.

ವರ್ಷ	ಕೈಮಗ್ಗ ನೇಕಾರರಿಗೆ	ವಿದ್ಯುತ್ ಮಗ್ಗ ನೇಕಾರರಿಗೆ	ಒಟ್ಟು
2005–06	**1387**	**111**	**1498**
2006–07	**100**	**265**	**365**

ಆ) ಕೇಂದ್ರ ಪುರಸ್ಕೃತ ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆ ಜಿಲ್ಲಾ ವಲಯದ ಕೈಮಗ್ಗ ಉದ್ದಿಮೆಗಳಿಗೆ ಸಹಾಯ ಯೋಜನೆ ಮತ್ತು ರಾಜ್ಯ ವಲಯದ ವಿದ್ಯುತ್ ಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಗಳಡಿ ಸದರಿ ವಸತಿ ಕಾರ್ಯಾಗಾರಗಳನ್ನು ಒದಗಿಸಲಾಗಿದೆ.

ಇ) ಕೈಮಗ್ಗ ನೇಕಾರರು ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳುವಾಗ ಶೆಡ್‌ಸಹಿತ ಮನೆ ಕಟ್ಟಿಕೊಳ್ಳಲು ರೂ. 25,000/– ಗಳ ನಿರ್ಮಾಣ ವೆಚ್ಚದ ಜೊತೆಗೆ ಶೆಡ್ ನಿರ್ಮಾಣಕ್ಕೆ ರೂ. 5,000/– ಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟು ರೂ. 30,000/– ಗಳನ್ನು ನಿಗದಿಪಡಿಸಲಾಗಿದ್ದು, ಸದರಿ ಯೋಜನೆಯಡಿ ಈವರೆಗೆ 1513 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ) 2006–07 ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ಆಶ್ರಯ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಬಿಜಾಪುರ, ಬಾಗಲಕೋಟೆ, ಗದಗ್ ಮತ್ತು ಧಾರವಾಡ ಜಿಲ್ಲೆಗಳ ಕೈಮಗ್ಗ ನೇಕಾರರಿಗೆ ಅನುಷ್ಠಾನಗೊಳಿಸಲಾಗುತ್ತಿದೆ.